ಮನನ ಮಾಡಿಕೊಂಡಿರುವೆಯಷ್ಟೇ?'' ಗೊಂದಲವಿರದಂತೆ ಅಗತ್ಯವಾದುದನ್ನು ಬರೆದು ಅವನ ಹಣೆಗಂಟಿಸಿಟ್ಟಂತೆ ಇತ್ತು ಅವಳ ಮಾತು. ಗಂಡನಿರಲಿ, ಮಗನಿರಲಿ, ಇನ್ನಾರೇ ಇರಲಿ, ಎಲ್ಲವೂ ಅಚ್ಚುಕಟ್ಟಾಗಿರುವಂತೆ ನೋಡಿಕೊಳ್ಳುವವಳು, ದೀಪಾ.

ಗಣೇಶೋತ್ಸವದ ಈ ಯೋಜನೆಯಲ್ಲಿ ಮುಂದಿನ ಹಂತಗಳ ಬಗ್ಗೆ ಸುನಿಲ್ ಚೆನ್ನಾಗಿಯೂ ಅರಿತಿದ್ದ. ಪಠಿಸಬೇಕಾದ ಮಂತ್ರಗಳ ಬಗ್ಗೆ ಹಾಗೂ ಕೊನೆಯಲ್ಲಿ ಮುಂದಿನ ವರುಷ ಬೇಗನೇ ಮರಳಿ ಬರುವ ಆಸ್ವಾಸನೆಯನ್ನು ಕೇಳಿ ಪಡೆವ ಬಗ್ಗೆ ಮರಾಠಿಯಲ್ಲೇ ಇದ್ದ ಬೇಡಿಕೆಯದು ''ಪುಡ್ಚ್ಯಾ ವರ್ಷೀ ಲೌಕರ್ ಯಾ!''

ಎಲ್ಲವನ್ನೂ ಸರಿಯಾಗಿಯೇ ಗುರುತಿಸಿಕೊಂಡಿದ್ದ, ಸುನಿಲ್.

ಎಲ್ಲವೂ ನೇರವಾಗಿತ್ತು. ಮುಖ್ಯವಾಗಿ ಮನೆಗೆ ಬಂದು ತಮ್ಮನ್ನು ಅನುಗ್ರಹಿಸಿದ್ದಕ್ಕೆ ಗಜಮುಖನಿಗೆ ಧನ್ಯವಾದಾರ್ಪಣೆ ಮಾಡಲಿತ್ತು. ಸನಿಹದ ಹರಿವ ನೀರಿನಾಶ್ರಯದತ್ತ ಗಣೇಶನ ಜೊತೆ ಸಾಗುವ ಎಲ್ಲ ವಿಧಿ, ವಿಧಾನಗಳೂ ನಡೆಸಲ್ಪಟ್ಟವು. ಭಾರತದಲ್ಲಿ ಸಾಂಪ್ರದಾಯಿಕವಾಗಿ ಯಾವುದೇ ನದಿ, ಕೆರೆ, ಸರೋವರ, ಸಾಗರ ಇಲ್ಲವೇ ಮನೆ ಬಾವಿಯಲ್ಲಿ ಈ ವಿಸರ್ಜನೆ ನಡೆಯುತ್ತಿತ್ತು. ಆದರೆ ಈ ಶೀತಲ ಮಿನಿಸೋಟಾದಲ್ಲಿ ಹೀಗೆ ಒಂದು ಮೃಣ್ಮಯ ಮೂರ್ತಿಯನ್ನು ಪರವಾನಗಿ ಇರದೆ ವಿಸರ್ಜಿಸುವದೆಂತು? ಭಾರತದಲ್ಲಿ ಅಂತಹ ಪರವಾನಗಿಯ ಅಗತ್ಯವಿರಲಿಲ್ಲ. ಸಹಜ ನೀರಿನಾಶ್ರಯವಿರದ ಇಲ್ಲಿ, ಬದಲಿಗೆ ಹೊಸತೊಂದು ಆವಿಷ್ಕಾರವಾಗಿತ್ತು. ತುಂಬಿದ ಬಾಲ್ದಿ ನೀರನ್ನೇ ಅದಕ್ಕಾಗಿ ಆರಿಸಲಾಗಿತ್ತು. ಗಣೇಶ ನೀರಲ್ಲಿ ಕರಗುವನೋ ಇಲ್ಲವೋ ಎಂಬುದು ಇನ್ನೀಗ ಬೇಗನೇ ಸಿದ್ಧವಾಗಲಿತ್ತು.

''ಗಣಪತಿ ಬಪ್ಪಾ ಮೋರ್ಯಾ
ಪುಡ್ಚ್ಯಾ ವರ್ಷೀ ಲೌಕರ್ಯಾ!'' ಎಂಬ ಘೋಷ ಮೊಳಗಿತು.

ಮೂರ್ತಿ ಮೆಲ್ಲನೆ ಅರ್ಧಅಡಿ ಕೆಳಗಿಳಿದು ಬಾಲ್ದಿಯ ಬುಡದಲ್ಲಿ ವಾಲಿ ನಿಂತಿತು. ಮೇಲಿಂದ ತನ್ನತ್ತ ಇಣುಕುತ್ತಾ ಏನೋ ಆಗುವುದೆಂದು ಕಾಯುತ್ತಿದ್ದ ಮೂರು ಮುಖಗಳತ್ತ ದಿಟ್ಟಿಸಿತು. ಕರಗಿದರೆ, ನೀರಲ್ಲೊಂದಾದ ಮಣ್ಣನ್ನು ಮತ್ತೆ ಬಾತ್‌ಟಬ್‌ನಲ್ಲಿ ಚೆಲ್ಲಿ ಬಿಡಬಹುದಿತ್ತು. ಆಧುನಿಕ ಕಾಲದಲ್ಲಿ ಹೊಸ ವಿಧಾನಗಳು ಆವಿಷ್ಕರಿಸಲ್ಪಡುತ್ತಿವೆ, ಎಂದುಕೊಂಡ ದೀಪಾ, ಸುನಿಲ್, ಬಾಲ್ದಿಯನ್ನು ಅಲ್ಲೇ ಆ ಕೆಳ ಅಂತಸ್ತಿನ ಬಚ್ಚಲು ಮನೆಯಲ್ಲಿ ಬಿಟ್ಟು, ಎಲ್ಲವೂ ಕರಗಿ ಹೋಗಲೆಂದು ತಮ್ಮ ಕೆಲಸಕ್ಕೆ ಮರಳಿದರು.

ಎಲ್ಲರೂ ತಮ್ಮ ತಮ್ಮ ಕಾರ್ಯಕ್ಷೇತ್ರಕ್ಕೆ ಮರಳಿದರು. ದೀಪಾ, ಸುನಿಲ್ ತಮ್ಮ ತಮ್ಮ ಕೆಲಸಗಳಿಗೆ, ರವಿ ತನ್ನ ಶಾಲಾ ಜೀವನಕ್ಕೆ. ಸಾಕರ್ ಪ್ರಾಕ್ಟೀಸ್, ಓಟದಂಗಣದ ಕೂಟಗಳು, ಭಾಷಣ ತರಬೇತಿ, ಸಾಯನ್ಸ್ ಪ್ರಾಜೆಕ್ಟ್‌ಗಳು ಎಲ್ಲವೂ ಕಾದಿತ್ತು. ದೀಪಾ ತನ್ನ ತಂಗಿಯೊಡನೆ ತಮ್ಮ ತಂದೆಯ ಎಂಬತ್ತನೇ ಹುಟ್ಟುಹಬ್ಬಕ್ಕಾಗಿ ಭಾರತಕ್ಕೆ ರಹಸ್ಯ ಭೇಟಿ ಕೊಡುವ ತಯಾರಿಯಲ್ಲಿದ್ದಳು. ಸುನಿಲ್ ತನ್ನ ಕೆಲಸದಲ್ಲಿ ವ್ಯಸ್ತನಿದ್ದ; ಜೊತೆಗೆ ವಿಲ್ಲೋ ಟೀವಿಯಲ್ಲಿ ಇಂಡಿಯಾ ಸೌತ್ ಆಫ್ರಿಕಾ ಸರಣಿ ಪಂದ್ಯದ ವೀಕ್ಷಣೆಯೂ ಕಾದಿತ್ತು. ಇವೆಲ್ಲದರಲ್ಲಿ, ವಾರವಲ್ಲ, ವಾರಗಳೇ ಸರಿದು ಹೋದುವು, ಹಾಗೂ ಬಾಲ್ದಿನೀರಲ್ಲಿ ಮುಳುಗಿದ್ದ ಸರ್ವಶಕ್ತ ಗಣಪ ಮರೆತೇ ಹೋಗಿದ್ದ. ತಳಮಹಡಿಯನ್ನು ಉಪಯೋಗಿಸುತ್ತಿದ್ದುದೇ ಬಲು ಅಪರೂಪ; ಎಂದಾದರೂ ಯಾವುದೋ ಚಿತ್ರವೀಕ್ಷಣೆಗೆ ಉಪಯೋಗಿಸುವುದಿದ್ದರೂ ಬಚ್ಚಲು ಮನೆಯ ಉಪಯೋಗ ಮತ್ತೂ ಅಪರೂಪವಿತ್ತು. ಹಾಗೂ ಒಂದುವೇಳೆ ಹೋಗಿದ್ದರೂ, ಅಲ್ಲಿ ಹಣಿಕಿ ಹಾಕಿ ಮೂರ್ತಿ